# All India Radio: Bangalore
# National Bulletins In Kannada
# 16.07.2025 / 1.10pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**16.07.2025 / 1.10pm**

**<><*<><>*><>**

**ಮುಖ್ಯಾಂಶಗಳು**

೧. ಸಂಸತ್ತಿನ ಮುಂಗಾರು ಅಧಿವೇಶನ ಆರಂಭ ಹಿನ್ನೆಲೆ: ಇದೇ ಭಾನುವಾರ ಸರ್ವಪಕ್ಷಗಳ ಸಭೆ ಕರೆದ ಕೇಂದ್ರ ಸರ್ಕಾರ

೨. ಸಮಾಜವನ್ನು ಜಾತಿ ಆಧಾರದಲ್ಲಿ ವಿಭಜಿಸುವ ರಾಜಕೀಯ ಪಕ್ಷಗಳ ಪ್ರವೃತ್ತಿ ಅಪಾಯಕಾರಿ- ಸುಪ್ರೀಂಕೋರ್ಟ್ ಕಳವಳ

೩. ಪಹಲ್ಗಾಮ್ ದಾಳಿಕೋರರನ್ನು ನ್ಯಾಯಕ್ಕೆ ಗುರಿಪಡಿಸಲು ಎಲ್ಲ ಪ್ರಯತ್ನ ಮುಂದುವರಿಕೆ- ಸಚಿವ ಡಾ.ಎಸ್.ಜೈಶಂಕರ್

೪. ಭಾರತ - ಇಂಗ್ಲೆಂಡ್ ನಡುವಿನ ಮೂರು ಪಂದ್ಯಗಳ ಮಹಿಳಾ ಏಕದಿನ ಕ್ರಿಕೆಟ್ ಸರಣಿ ಇಂದಿನಿಂದ ಆರಂಭ

><><><><><><><><><><

ಬರುವ ಸೋಮವಾರದಿಂದ ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇದೇ ಭಾನುವಾರ ಸರ್ವಪಕ್ಷಗಳ ಸಭೆ ಕರೆದಿದೆ. ಸಭೆಯಲ್ಲಿ, ಸರ್ಕಾರ ಸಂಸತ್ತಿನ ಉಭಯ ಸದನಗಳ ಸುಗಮ ಕಲಾಪಕ್ಕೆ ಪ್ರತಿಪಕ್ಷಗಳ ಸಹಕಾರವನ್ನು ಕೋರಲಿದೆ. ಸಂಸತ್ತಿನ ಮುಂಗಾರು ಅಧಿವೇಶನ, ಇದೇ ೨೧ ರಿಂದ ಆರಂಭವಾಗಲಿದ್ದು, ಆಗಸ್ಟ್ ೨೧ರವರೆಗೆ ನಡೆಯಲಿದೆ. ಈ ವೇಳೆ, ಹಲವು ಮಹತ್ವದ ಮಸೂದೆಗಳ ಕುರಿತು ಚರ್ಚಿಸಿ, ಅಂಗೀಕಾರ ನೀಡುವುದು ಕಲಾಪ ಪಟ್ಟಿಯಲ್ಲಿ ಸೇರಿದೆ.

><><><><><><><><><><

ರಾಜಕೀಯ ಪಕ್ಷಗಳು, ಪ್ರಾದೇಶಿಕತೆ ಮತ್ತು ಧರ್ಮವನ್ನು ಬಳಕೆ ಮಾಡಿಕೊಂಡು ಮತಗಳನ್ನು ಪಡೆಯಲು ಯತ್ನಿಸುತ್ತಿವೆ ಎಂದು ಸುಪ್ರೀಂಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಸಮಾಜವನ್ನು ಜಾತಿ ಆಧಾರದಲ್ಲಿ ವಿಭಜಿಸುವುದನ್ನು ಉತ್ತೇಜಿಸುವ ಇಂತಹ ಪ್ರವೃತ್ತಿ ಅಪಾಯಕಾರಿ ಎಂದು ಹೇಳಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೋಯ್ ಮಾಲ್ಯಾ ಬಗ್ಚಿ ಅವರಿದ್ದ

ನ್ಯಾಯಪೀಠ, ಇಂತಹ ಪದ್ಧತಿಗಳು ದೇಶದ ಏಕತೆ ಮತ್ತು ಸಮಗ್ರತೆಗೆ ಅಪಾಯಕಾರಿಯಾಗಿವೆ ಎಂದು ಅಭಿಪ್ರಾಯಪಟ್ಟಿದೆ. ಎಐಎಂಐಎಂ ಪಕ್ಷ ನೋಂದಣಿಗೆ ನಿರಾಕರಿಸಿರುವುದನ್ನು ಪ್ರಶ್ನಿಸಿ, ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ, ನ್ಯಾಯಾಲಯ ಈ ಅಭಿಮತವನ್ನು ವ್ಯಕ್ತಪಡಿಸಿದೆ.

><><><><><><><><><><><

ಜಮ್ಮು ಮತ್ತು ಕಾಶ್ಮೀರದಲ್ಲಿ ಅಭಿವೃದ್ಧಿಯಾಗುತ್ತಿದ್ದ ಪ್ರವಾಸೋದ್ಯಮಕ್ಕೆ ಹೊಡೆತ ನೀಡುವುದು ಹಾಗೂ ಧಾರ್ಮಿಕ ವಿಭಜನೆಯ ಬೀಜವನ್ನು ಬಿತ್ತುವ ದುರುದ್ದೇಶದಿಂದ ಪಹಲ್ಗಾಮ್ ಭಯೋತ್ಪಾದಕ ದಾಳಿ ನಡೆಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ. ಚೀನಾದ  ತೈನ್‌ಜಿನ್‌ನಲ್ಲಿ ಶಾಂಘೈ ಸಹಕಾರ ಸಂಸ್ಥೆಯ ವಿದೇಶಾಂಗ ಸಚಿವ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ಬಂಡುಕೋರರ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ಹೇಳಿದರು. ಏಪ್ರಿಲ್ ೨೨ ರಂದು ನಡೆದ ದಾಳಿಯನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕೂಡ ಬಲವಾಗಿ ಖಂಡಿಸಿದೆ. ಈ ಘಟನೆಗೆ ಕಾರಣಕರ್ತರಾದವರನ್ನು ಹೊಣೆಗಾರರನ್ನಾಗಿ ಮಾಡಬೇಕು ಹಾಗೂ ಅವರಿಗೆ ಯಾವುದೇ ಆರ್ಥಿಕ ನೆರವು ಸಿಗದಂತೆ ನೋಡಿಕೊಳ್ಳಬೇಕಾಗಿದೆ ಎಂದ ಅವರು, ದಾಳಿಕೋರರನ್ನು ನ್ಯಾಯಕ್ಕೆ ಗುರಿಪಡಿಸಲು ಎಲ್ಲ ಪ್ರಯತ್ನಗಳನ್ನು ಭಾರತ ಮುಂದುವರಿಸಲಿದೆ ಎಂದು ತಿಳಿಸಿದರು.

><><><><><><><><><><><

'ಆಪರೇಷನ್ ಸಿಂದೂರ್' ಸಮಯದಲ್ಲಿ ಪಾಕಿಸ್ತಾನವು, ನಿರಾಯುಧ ಡ್ರೋಣ್‌ಗಳು ಮತ್ತು ಯುದ್ಧ ಸಾಮಗ್ರಿಗಳನ್ನು ಬಳಕೆ ಮಾಡಿತ್ತು. ಆದರೆ, ಭಾರತೀಯ ಸಶಸ್ತ್ರಪಡೆಗಳು ಅವುಗಳನ್ನು ಯಶಸ್ವಿಯಾಗಿ ನಿಷ್ಕ್ರಿಯಗೊಳಿಸಿದವು ಎಂದು ರಕ್ಷಣಾ ಪಡೆಗಳು ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಹೇಳಿದ್ದಾರೆ. ನವದೆಹಲಿಯಲ್ಲಿ ಮಾನವ ರಹಿತ ವೈಮಾನಿಕ ವಾಹನ ಮತ್ತು ದೇಶೀಕರಣ ಕುರಿತ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅವರು, ಪಾಕಿಸ್ತಾನದ ಯಾವುದೇ ಡ್ರೋಣ್‌ಗಳು ಭಾರತೀಯ ಮಿಲಿಟರಿ ಅಥವಾ ನಾಗರಿಕ ಮೂಲಸೌಕರ್ಯಕ್ಕೆ ಯಾವುದೇ ಹಾನಿ ಮಾಡಿಲ್ಲ ಎಂದು ತಿಳಿಸಿದರು. ದೇಶವು, ತನ್ನನ್ನು ತಾನು ರಕ್ಷಿಸಿಕೊಳ್ಳಲು ಹೆಚ್ಚಿನ ಹೂಡಿಕೆ ಮಾಡಬೇಕು ಎಂದ ಅವರು ವಿದೇಶಿ ತಂತ್ರಜ್ಞಾನದ ಮೇಲಿನ ಅವಲಂಬನೆ ನಮ್ಮ ಸಿದ್ಧತೆಯನ್ನು ದುರ್ಬಲಗೊಳಿಸುತ್ತದೆ ಎಂದು ಹೇಳಿದ್ದಾರೆ.

**ಧ್ವನಿ: ಅನಿಲ್ ಚೌಹಾಣ್( ೨೫ ಸೆಕೆಂಡ್ಸ್)**

><><><><><><><><><><><

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ನಾಳೆ ೨೦೨೪-೨೫ನೇ ಸಾಲಿನ ಪ್ರತಿಷ್ಠಿತ ಸ್ವಚ್ಛ ಸರ್ವೇಕ್ಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. 'ಸ್ವಚ್ಛ ಭಾರತ ನಗರ ಮಿಷನ್' ನಗರಗಳ ನಿರಂತರ ಪ್ರಯತ್ನಗಳನ್ನು ಗುರುತಿಸುತ್ತದೆ. ಈ ವರ್ಷ, ಸೂಪರ್ ಸ್ವಚ್ಛ ಲೀಗ್ ನಗರಗಳು ಮತ್ತು ಐದು ಜನಸಂಖ್ಯೆ ವಿಭಾಗಗಳಲ್ಲಿ ಅಗ್ರ ಮೂರು ಸ್ವಚ್ಛ ನಗರಗಳು ಸೇರಿದಂತೆ ನಾಲ್ಕು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಈ ವರ್ಷ ಒಟ್ಟು ೭೮ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಸ್ವಚ್ಛ ಸರ್ವೇಕ್ಷಣ ೨೦೨೪-೨೫ ನಗರ ಸ್ವಚ್ಛತೆ ಮತ್ತು ಸೇವಾ ವಿತರಣೆಯನ್ನು ನಿರ್ಣಯಿಸಲು ಸ್ಮಾರ್ಟ್, ರಚನಾತ್ಮಕ ವಿಧಾನವನ್ನು ಅಳವಡಿಸಿಕೊಂಡಿದೆ. ಇದು ನಗರಗಳಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಯ ಸಂಪೂರ್ಣ ನೋಟವನ್ನು ನೀಡುತ್ತದೆ ಎಂದು ಸಚಿವಾಲಯ ತಿಳಿಸಿದೆ.

><><><><><><><><><><><><

ಭಾರತದಲ್ಲಿ ಇಂದು ಕೃತಕ ಬುದ್ಧಿಮತ್ತೆ-ಎಐ ಪ್ರಶಂಸಾ ದಿನ ಆಚರಿಸಲಾಗುತ್ತಿದೆ. ಜಾಗತಿಕ ಎಐ ಆಯಾಮದಲ್ಲಿ ದೇಶದ ಹೆಚ್ಚುತ್ತಿರುವ ಪಾತ್ರವನ್ನು ಸ್ಮರಿಸಲು ಈ ದಿನ ಆಚರಿಸುತ್ತದೆ. ಬೆಂಗಳೂರು ಮತ್ತು ಹೈದರಾಬಾದ್‌ನಂತಹ ತಂತ್ರಜ್ಞಾನ ಕೇಂದ್ರಗಳಿಂದ ಗ್ರಾಮೀಣ ಪ್ರದೇಶಗಳವರೆಗೆ ಕೃತಕ ಬುದ್ಧಿಮತ್ತೆ ದೇಶದಲ್ಲಿ ಆರೋಗ್ಯ ರಕ್ಷಣೆ, ಶಿಕ್ಷಣ, ಕೃಷಿ, ಆಡಳಿತ ಮತ್ತು ಉದ್ಯಮಗಳಲ್ಲಿ ಗಮನಾರ್ಹ ಪರಿವರ್ತನೆಯನ್ನು ತಂದಿದೆ. ಕೃತಕ ಬುದ್ಧಿಮತ್ತೆಯಲ್ಲಿ ಭಾರತದ ಪ್ರಗತಿಯು ಹಲವು ವರ್ಷಗಳ ನಿಖರ ಯೋಜನೆ ಮತ್ತು ಬೆಂಬಲದಿಂದ ಸಾಧ್ಯವಾಗಿದೆ. ಸರ್ಕಾರದ ಎಲ್ಲ ವಲಯಗಳಲ್ಲೂ ಕೃತಕ ಬುದ್ಧಿಮತ್ತೆ ದೂರದೃಷ್ಟಿ ಮತ್ತು ರಾಷ್ಟ್ರೀಯ ಕಾರ್ಯತಂತ್ರ ಬಳಕೆ ಮಾಡುತ್ತಿದೆ. ಅಲ್ಲದೆ, ಆರ್ಥಿಕ ಬೆಳವಣಿಗೆ, ಜೀವನಮಟ್ಟ ಸುಧಾರಣೆ ಮತ್ತು ಸಮಾನತೆಯನ್ನು ಉತ್ತೇಜಿಸಲು ಎಐ ಬಳಕೆ ಮಾಡುವ ಗುರಿಯನ್ನು ಹೊಂದಿದೆ.

**ಈ ಕುರಿತು ಒಂದು ವರದಿ. (ಅಭಯ್ ಧಾಮ್ಲೆ ೧ ನಿಮಿಷ ೬ ಸೆಕೆಂಡ್ಸ್)**

**ಭಾರತದ ಕೃತಕ ಬುದ್ಧಿಮತ್ತೆಯ ಪಯಣವು ೧೯೬೦ರ ದಶಕದಲ್ಲಿ ಆರಂಭಿಕ ಕಂಪ್ಯೂಟರ್ ವಿಜ್ಞಾನ ಸಂಶೋಧನೆಯೊಂದಿಗೆ ಆರಂಭವಾಯಿತು. ೧೯೮೬ ರಲ್ಲಿ ಜ್ಞಾನ-ಆಧಾರಿತ ಕಂಪ್ಯೂಟರ್ ಸಿಸ್ಟಮ್ಸ್ ಯೋಜನೆಯೊಂದಿಗೆ ಒಂದು ಪ್ರಮುಖ ಹೆಜ್ಜೆ ಇಡಲಾಗಿತ್ತು. ಆನಂತರ ೧೯೯೦ ದಶಕದಲ್ಲಿ ಸಿ-ಡಾಕ್ ಸೂಪರ್ ಕಂಪ್ಯೂಟರ್ ಅನ್ನು ಅಭಿವೃದ್ಧಿಪಡಿಸುವ ಮೂಲಕ ಕೃತಕಬುದ್ಧಿಮತ್ತೆ ಬಳಕೆ ಆರಂಭಕ್ಕೆ ಚಾಲನೆ ನೀಡಿತು. ಎರಡು ಸಾವಿರದ ಇಸವಿ ವೇಳೆಗೆ ಟಿಸಿಎಸ್, ಇನ್ಫೋಸಿಸ್ ಮತ್ತು ವಿಪ್ರೋ ಸೇರಿದಂತೆ ಪ್ರಮುಖ ಮಾಹಿತಿ ತಂತ್ರಜ್ಞಾನ ಕಂಪನಿಗಳು ಎಐ ನಲ್ಲಿ ತಮ್ಮ ಹೂಡಿಕೆಯನ್ನು ಆರಂಭಿಸಿದವು. ಆ ಮೂಲಕ ಪ್ರತಿಭೆಯನ್ನು ಪೋಷಿಸಲು ಮುಂದಾದವು.**

೨೦೧೫ರಲ್ಲಿ ಭಾರತ, ಡಿಜಿಟಲ್ ಇಂಡಿಯಾ ಆರಂಭಿಸಿತು. ೨೦೧೮ರಲ್ಲಿ ನೀತಿ ಆಯೋಗ, ಕೃತಕಬದ್ಧಿಮತ್ತೆ ಕಾರ್ಯತಂತ್ರಕ್ಕೆ ಒತ್ತು ನೀಡಿದ್ದರಿಂದ ದೇಶದಲ್ಲಿ ಎಐ ಗೆ ಹೊಸ ಆಯಾಮ ದೊರೆಯಿತು. ಭಾರತ ಇಂದು ಜಾಗತಿಕ ಎಐ ನಾಯಕನಾಗುತ್ತಿದೆ. ದೇಶದ ಪ್ರತಿಭಾವಂತ ಸಾಫ್ಟ್‌ವೇರ್ ತಜ್ಞರು ಕೃತಕಬುದ್ಧಿಮತ್ತೆ ಬಳಸಿ ಹಲವು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುತ್ತಿದ್ದಾರೆ. ದೇಶದಲ್ಲಿ ಕೃತಕಬುದ್ಧಿಮತ್ತೆಯನ್ನು ಎಲ್ಲ ವಲಯಗಳಲ್ಲಿ ಬಳಕೆ ಮಾಡುವ ಪ್ರಯತ್ನಗಳನ್ನು ಬೆಂಬಲಿಸಲು ಕೇಂದ್ರ ಸರ್ಕಾರವು ಸ್ಕಿಲ್ ಇಂಡಿಯಾ ಎಐ ಪೋರ್ಟಲ್, ರಾಷ್ಟ್ರೀಯ ಕೃತಕ ಬುದ್ಧಿಮತ್ತೆ ಕೌಶಲ್ಯ ಕಾರ್ಯಕ್ರಮ ಮತ್ತು ಎಐ ಯುವ ಬೂಟ್‌ಕ್ಯಾಂಪ್‌ನಂತಹ ಕಾರ್ಯಕ್ರಮಗಳನ್ನು ಆರಂಭಿಸಿದೆ.

><><><><><><><><><><

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಇದೇ ೨೭ ರಂದು ಭಾನುವಾರ ಬೆಳಗ್ಗೆ ೧೧ ಗಂಟೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೪ನೇ ಆವೃತ್ತಿಯಾಗಿದೆ. ಕಾರ್ಯಕ್ರಮಕ್ಕೆ ನಿಮ್ಮ ಸಲಹೆ, ಅಭಿಪ್ರಾಯಗಳನ್ನು ನೀಡಲು ಉಚಿತ ದೂರವಾಣಿ ಸಂಖ್ಯೆ ೧೮೦೦-೧೧-೭೮೦೦ ಗೆ ಕರೆ ಮಾಡಬಹುದು. ಇಲ್ಲವೇ ನಮೋ ಆಪ್ ಅಥವಾ ಮೈ ಜಿಒವಿ ಡಾಟ್ ಇನ್ ವೇದಿಕೆಯ ಮೂಲಕ ಹಂಚಿಕೊಳ್ಳಬಹುದು.

><><><><><><><><><><

ಜಪಾನ್ ಓಪನ್ ಬ್ಯಾಡ್ಮಿಂಟನ್‌ನಲ್ಲಿ, ಭಾರತದ ಅಭಿಯಾನ ಆರಂಭವಾಗಿದೆ. ಟೋಕಿಯೊದಲ್ಲಿ ಇಂದು ನಡೆದ ಪಂದ್ಯಗಳಲ್ಲಿ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಹಾಗೂ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಲಕ್ಷ್ಯ ಸೇನ್ ಮುಂದಿನ ಸುತ್ತಿಗೆ ಪ್ರವೇಶಿಸಿದ್ದಾರೆ. ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಆರಂಭಿಕ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಕಾಂಗ್ ಮಿನ್ ಹ್ಯುಕ್ ಮತ್ತು ಕಿಮ್ ಡಾಂಗ್ ಜು ಜೋಡಿಯನ್ನು ೨೧-೧೮, ೨೧-೧೦ ಸೆಟ್‌ಗಳಿಂದ ಪರಾಭವಗೊಳಿಸಿದೆ. ಪುರುಷರ ಸಿಂಗಲ್ಸ್‌ನಲ್ಲಿ, ಲಕ್ಷ್ಯ ಸೇನ್ ಚೀನಾದ ವಾಂಗ್ ಝೆಂಗ್ ಕ್ಸಿಂಗ್ ವಿರುದ್ಧ ೨೧-೧೧, ೨೧-೧೮ ಸೆಟ್‌ಗಳಿಂದ ಜಯ ಸಾಧಿಸಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು, ಕೊರಿಯಾದ ಸಿಮ್ ಯು ಜಿನ್ ವಿರುದ್ಧ ಸೋಲುವ ಮೂಲಕ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದಾರೆ.

><><><><><><><><><><

ಭಾರತ ಹಾಗೂ ಇಂಗ್ಲೆಂಡ್ ನಡುವಿನ ಮೂರು ಪಂದ್ಯಗಳ ಮಹಿಳಾ ಏಕದಿನ ಕ್ರಿಕೆಟ್ ಸರಣಿ ಇಂದಿನಿಂದ ಇಂಗ್ಲೆಂಡ್‌ನಲ್ಲಿ ಆರಂಭವಾಗಲಿದೆ. ಸೌತಾಂಪ್ಟನ್‌ನ ರೋಸ್ ಬೌಲ್‌ನಲ್ಲಿಂದು ನಡೆಯಲಿರುವ ಸರಣಿಯ ಮೊದಲ ಪಂದ್ಯ ಭಾರತೀಯ ಕಾಲಮಾನ ಸಂಜೆ ೫:೩೦ ಕ್ಕೆ ಆರಂಭವಾಗಲಿದೆ. ಎರಡನೇ ಪಂದ್ಯ ಇದೇ ೧೯ರಂದು ಲಂಡನ್ ಲಾರ್ಡ್ಸ್‌ನಲ್ಲಿ ಹಾಗೂ ಇದೇ ೨೨ ರಂದು ಮೂರನೇ ಪಂದ್ಯ ಚೆಸ್ಟರ್-ಲೇ-ಸ್ಟ್ರೀಟ್‌ನಲ್ಲಿ ನಿಗದಿಯಾಗಿದೆ. ಪಂದ್ಯಾವಳಿ, ಈ ವರ್ಷಾಂತ್ಯದಲ್ಲಿ ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್‌ಗೆ ಭಾರತದ ಸಿದ್ಧತೆಯ ಭಾಗವಾಗಿದೆ.

><><><><><><><><><><><><><><><><><><